# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮರಿತಿಬ್ಬೇಗೌಡ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2416**

**ಉತ್ತರಿಸಬೇಕಾದ ದಿನಾಂಕ : 22-03-2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಸಂಘಗಳ ಮತ್ತು ಸಹಕಾರಿ ಬ್ಯಾಂಕುಗಳ ಸಂಬಂಧ ಇರುವ ಒಟ್ಟು ವ್ಯಾಜ್ಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಸಹಕಾರ ಸಂಘಗಳ ಮತ್ತು ಸಹಕಾರಿ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ಒಟ್ಟು 20028 ವ್ಯಾಜ್ಯ ಪ್ರಕರಣಗಳಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಸಹಕಾರಿ ಕಾಯ್ದೆ ಪ್ರಕಾರ ನಿಗಧಿತ ಸಮಯದಲ್ಲಿ ಸಹಕಾರಿ ಇಲಾಖಾ ಅಧಿಕಾರಿಗಳ ನ್ಯಾಯಾಲಯದಲ್ಲಿ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಇ) | ಬಂದಿದಲ್ಲಿ, ವಿಳಂಬಕ್ಕೆ ಕಾರಣಗಳೇನು; | ಸಹಕಾರಿ ಕಾಯ್ದೆಯಡಿಯಲ್ಲಿ ಸ್ಥಾಪಿತವಾಗಿರುವ ನ್ಯಾಯಾಲಯ ವ್ಯವಸ್ಥೆಯು ಅರೆನ್ಯಾಯಿಕ ವ್ಯವಸ್ಥೆಯಲ್ಲಿ ಕೆಲಸ ನಿರ್ವಹಿಸುವ ನ್ಯಾಯಾಲಯಗಳಾಗಿರುತ್ತವೆ. ಅಧಿಕಾರಿಗಳು ಕಛೇರಿಯ ಆಡಳಿತಾತ್ಮಕ ಕೆಲಸ ಕಾರ್ಯಗಳೊಂದಿಗೆ ವ್ಯಾಜ್ಯಗಳ ಇತ್ಯರ್ಥವನ್ನು ನಿರ್ವಹಿಸಬೇಕಾಗಿರುತ್ತದೆ.<br><br>ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾಖಲಾಗುವ ದಾವೆಗಳನ್ನು ಮತ್ತು ಕಲಂ 69 ರಡಿ ದಾಖಲಾಗುವ ಅಧಿಭಾರ ಪ್ರಕರಣಗಳನ್ನು ಹಾಗೂ ಕಲಂ 106 ರಡಿ ದಾಖಲಾಗುವ ಮೇಲ್ಮನವಿ ಪ್ರಕರಣಗಳನ್ನು ಸಹಕಾರ ಸಂಘಗಳ ಕಾಯ್ದೆ 1959 ರ ರೀತ್ಯಾ 18 ತಿಂಗಳೊಳಗಾಗಿ ಇತ್ಯರ್ಥಪಡಿಸಬೇಕಾಗಿರುತ್ತದೆ. ಆದರೆ, ಕೆಲವು ದಾವಾ ಪ್ರಕರಣಗಳಲ್ಲಿ ಮಧ್ಯಂತರ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪುನರ್ ಪರಿಶೀಲನಾ ಅರ್ಜಿ ದಾಖಲಾಗುವುದರಿಂದ ಹಾಗೂ ಮೇಲ್ಮನವಿ ಪ್ರಕರಣದಲ್ಲಿ ಹೊರಡಿಸುವ ಮಧ್ಯಂತರ ಆದೇಶದ ವಿರುದ್ಧ ಗೌರವ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಾಗುವುದರಿಂದ, ಮಾನ್ಯ ನ್ಯಾಯಾಲಯದ ನಿರ್ದೇಶನದಂತೆ ಪ್ರಕರಣದ ವಿಚಾರಣೆಯನ್ನು ಮುಂದೂಡಬೇಕಾದ ಅನಿವಾರ್ಯತೆ ಇರುವುದರಿಂದ ಹಾಗೂ ವರ್ಷದಲ್ಲಿ ಒಂದಲ್ಲ ಒಂದು ಸಹಕಾರ |

| | | |
|---|---|---|
| | | ಸಂಘಗಳ ಚುನಾವಣಾ ಪ್ರಕ್ರಿಯೆಗಳನ್ನು ಜರುಗಿಸಬೇಕಿರುವುದರಿಂದ, ಸಹಕಾರ ಇಲಾಖೆಯ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸಬೇಕಾಗಿದ್ದು, ಅಲ್ಲಿಯ ಸಭೆಗಳಿಗೆ ಹಾಜರಾಗಬೇಕಾಗಿರುವುದರಿಂದ, ಅಲ್ಲದೇ ಕಳೆದ 02 ವರ್ಷಗಳಲ್ಲಿ ರಾಜ್ಯಾದ್ಯಂತ ಕೋವಿಡ್-19 ಸಾಂಕ್ರಾಮಿಕವಾಗಿ ವ್ಯಾಪಿಸಿದ |
| | | ಕಾರಣದಿಂದಾಗಿ ವ್ಯಾಜ್ಯಗಳನ್ನು ನಿಗಧಿತ ಸಮಯದಲ್ಲಿ ಇತ್ಯರ್ಥಗೊಳಿಸಲು ವಿಳಂಬವಾಗಿರುತ್ತದೆ. |
| ಈ) | ಈ ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 69(4), ಕಲಂ 71(5) ಹಾಗೂ ಕಲಂ 106(5) ರಡಿಯಲ್ಲಿ ವ್ಯಾಜ್ಯಗಳನ್ನು ಎಷ್ಟು ಅವಧಿಯೊಳಗೆ ಇತ್ಯಥಪಡಿಸಬೇಕು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಅದರನ್ವಯ ಪ್ರತಿ ಮಾಹೆಯಾನ ನಡೆಯುವ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ವಿಶೇಷವಾಗಿ ಬಾಕಿ ಇರುವ ವ್ಯಾಜ್ಯ ಪ್ರಕರಣಗಳ ವಿಚಾರಣೆಯನ್ನು ಆದ್ಯತೆ ಮೇಲೆ ಕಾಲಮಿತಿಯೊಳಗೆ ಜರುಗಿಸಿ ಇತ್ಯರ್ಥಪಡಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗುತ್ತಿದೆ. |
| ಉ) | ಸಹಕಾರಿ ಇಲಾಖೆಯ ಅಧಿಕಾರಿಗಳ ನ್ಯಾಯಾಲಯದಲ್ಲಿ ಭ್ರಷ್ಟಾಚಾರ ಅಧಿಕಾರ ದುರುಪಯೋಗ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು ವಿಭಾಗದ ಜಂಟಿ ನಿಬಂಧಕರಾಗಿದ್ದು, ಜೂನ್-2021 ರಲ್ಲಿ ನಿವೃತ್ತಿಯಾಗಿರುವ ಅಧಿಕಾರಿಯು ದಿನಾಂಕ:21.06.2021 ರಂದು ಸೇವೆಯಿಂದ ಅಮಾನತ್ತಿನಲ್ಲಿದ್ದು, ಸದರಿ ಅವಧಿಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 70 ರಡಿ ದಾಖಲಾಗಿದ್ದ ದಾವಾ ಸಂಖ್ಯೆ: ಜೆಆರ್‌ಬಿ/ಎಂಡಿ/07/2019-20 ರ ಪ್ರಕರಣದಲ್ಲಿ ದಿನಾಂಕ: 21-06-2021 ರಂದೇ ಅಂತಿಮ ಆದೇಶವನ್ನು ಹೊರಡಿಸಿರುತ್ತಾರೆಂದು ಪ್ರಶ್ನಿಸಿ ಗೌ॥ ಉಚ್ಚ ನ್ಯಾಯಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 12384/2021 (ಸಿಎಸ್-ಆರ್‌ಇಎಸ್) ದಾಖಲಾಗಿದ್ದು, ಗೌರವ ಉಚ್ಚ ನ್ಯಾಯಾಲಯವು ದಿನಾಂಕ: 01-10-2021 ರ ಆದೇಶದಲ್ಲಿ ಸದರಿ ಅಧಿಕಾರಿಯವರಿಗೆ ರೂ.5.00 ಲಕ್ಷ ದಂಡವಿಧಿಸಿರುತ್ತಾರೆ. ಉಳಿದಂತೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ. |
| ಊ) | ಹಾಗಾದಲ್ಲಿ, ಅಧಿಕಾರಿಗಳ ನ್ಯಾಯಾಲಯವನ್ನು ರದ್ದುಪಡಿಸಿ ವಿಭಾಗ ಮಟ್ಟದಲ್ಲಿ ಸಹಕಾರಿ ನ್ಯಾಯಾಲಯಗಳನ್ನು ಸ್ಥಾಪಿಸಲು ಸರ್ಕಾರ ಚಿಂತಿಸುವುದೇ? | ಅಧಿಕಾರಿಗಳ ನ್ಯಾಯಾಲಯಗಳನ್ನು ರದ್ದುಪಡಿಸಿ ವಿಭಾಗ ಮಟ್ಟದಲ್ಲಿ ಸಹಕಾರಿ ನ್ಯಾಯಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ ಸಿಒ 55 ಸಿಸಿಬಿ 2022**

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ 2416 ಕ್ಕೆ ಸಂಬಂಧಿಸಿದಂತೆ ಜಿಲ್ಲಾವಾರು ವಿವರ

| ಕ್ರಸಂ | ಕಛೇರಿ ಹೆಸರು | ಒಟ್ಟು |
|---|---|---|
| | ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಂಗಳೂರು ಪ್ರಾಂತ, ಬೆಂಗಳೂರು | 445 |
| 1 | ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ. | 88 |
| 2 | ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ. | 90 |
| 3 | ಸಹಕಾರ ಸಂಘಗಳ ಉಪ ನಿಬಂಧಕರು, 3ನೇ ವಲಯ, ಬೆಂಗಳೂರು ನಗರ ಜಿಲ್ಲೆ. | 86 |
| 4 | ಸಹಕಾರ ಸಂಘಗಳ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ. | 133 |
| 5 | ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ. | 62 |
| 6 | ಸಹಕಾರ ಸಂಘಗಳ ಉಪ ನಿಬಂಧಕರು, ರಾಮನಗರ ಜಿಲ್ಲೆ. ರಾಮನಗರ. | 310 |
| 7 | ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಜಿಲ್ಲೆ. ತುಮಕೂರು | 119 |
| 8 | ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ ಜಿಲ್ಲೆ. ಕೋಲಾರ | 64 |
| 9 | ಸಹಕಾರ ಸಂಘಗಳ ಉಪ ನಿಬಂಧಕರು, ಚಿಕ್ಕಬಳ್ಳಾಪುರ ಜಿಲ್ಲೆ. ಚಿಕ್ಕಬಳ್ಳಾಪುರ | 36 |
| 10 | ಸಹಕಾರ ಸಂಘಗಳ ಉಪ ನಿಬಂಧಕರು, ಚಿತ್ರದುರ್ಗ ಜಿಲ್ಲೆ. ಚಿತ್ರದುರ್ಗ | 31 |
| 11 | ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ. ದಾವಣಗೆರೆ | 209 |
| 12 | ಸಹಕಾರ ಸಂಘಗಳ ಉಪ ನಿಬಂಧಕರು, ಶಿವಮೊಗ್ಗ ಜಿಲ್ಲೆ. ಶಿವಮೊಗ್ಗ | 396 |
| | ಒಟ್ಟು | 2069 |
| | ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಮೈಸೂರು ಪ್ರಾಂತ, ಮೈಸೂರು | 1522 |
| 1 | ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ. ಮೈಸೂರು. | 365 |
| 2 | ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ. ಮಂಡ್ಯ | 353 |
| 3 | ಸಹಕಾರ ಸಂಘಗಳ ಉಪ ನಿಬಂಧಕರು, ಚಾಮರಾಜನಗರ ಜಿಲ್ಲೆ. ಚಾಮರಾಜನಗರ | 58 |
| 4 | ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ ಜಿಲ್ಲೆ. ಹಾಸನ. | 514 |
| 5 | ಸಹಕಾರ ಸಂಘಗಳ ಉಪ ನಿಬಂಧಕರು, ಕೊಡಗು ಜಿಲ್ಲೆ. ಮಡಿಕೇರಿ. | 194 |
| 6 | ಸಹಕಾರ ಸಂಘಗಳ ಉಪ ನಿಬಂಧಕರು, ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು | 819 |
| 7 | ಸಹಕಾರ ಸಂಘಗಳ ಉಪ ನಿಬಂಧಕರು, ಉಡುಪಿ ಜಿಲ್ಲೆ. ಉಡುಪಿ | 469 |
| 8 | ಸಹಕಾರ ಸಂಘಗಳ ಉಪ ನಿಬಂಧಕರು, ಚಿಕ್ಕಮಗಳೂರು ಜಿಲ್ಲೆ. ಚಿಕ್ಕಮಗಳೂರು | 292 |
| | ಒಟ್ಟು | 4586 |
| | ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಳಗಾವಿ ಪ್ರಾಂತ, ಬೆಳಗಾವಿ | 492 |
| 1 | ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ. ಬೆಳಗಾವಿ | 1567 |
| 2 | ಸಹಕಾರ ಸಂಘಗಳ ಉಪ ನಿಬಂಧಕರು, ವಿಜಯಪುರ ಜಿಲ್ಲೆ. ವಿಜಯಪುರ | 460 |
| 3 | ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟೆ ಜಿಲ್ಲೆ. ಬಾಗಲಕೋಟೆ | 283 |
| 4 | ಸಹಕಾರ ಸಂಘಗಳ ಉಪ ನಿಬಂಧಕರು, ಗದಗ ಜಿಲ್ಲೆ. ಗದಗ | 80 |
| 5 | ಸಹಕಾರ ಸಂಘಗಳ ಉಪ ನಿಬಂಧಕರು, ಕಾರವಾರ ಜಿಲ್ಲೆ. ಕಾರವಾರ | 1054 |
| 6 | ಸಹಕಾರ ಸಂಘಗಳ ಉಪ ನಿಬಂಧಕರು, ಧಾರವಾಡ ಜಿಲ್ಲೆ. ಧಾರವಾಡ | 145 |
| 7 | ಸಹಕಾರ ಸಂಘಗಳ ಉಪ ನಿಬಂಧಕರು, ಹಾವೇರಿ ಜಿಲ್ಲೆ. ಹಾವೇರಿ. | 152 |
| | ಒಟ್ಟು | 4233 |

| | | |
|---|---|---|
| | ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಕಲಬುರಗಿ ಪ್ರಾಂತ, ರಾಯಚೂರು. | 425 |
| 1 | ಸಹಕಾರ ಸಂಘಗಳ ಉಪ ನಿಬಂಧಕರು, ಕಲಬುರಗಿ ಜಿಲ್ಲೆ. ಕಲಬುರಗಿ. | 9 |
| 2 | ಸಹಕಾರ ಸಂಘಗಳ ಉಪ ನಿಬಂಧಕರು, ರಾಯಚೂರು ಜಿಲ್ಲೆ. ರಾಯಚೂರು | 77 |
| 3 | ಸಹಕಾರ ಸಂಘಗಳ ಉಪ ನಿಬಂಧಕರು, ಬೀದರ್ ಜಿಲ್ಲೆ. ಬೀದರ್ | 120 |
| 4 | ಸಹಕಾರ ಸಂಘಗಳ ಉಪ ನಿಬಂಧಕರು, ಕೊಪ್ಪಳ ಜಿಲ್ಲೆ. ಕೊಪ್ಪಳ | 70 |
| 5 | ಸಹಕಾರ ಸಂಘಗಳ ಉಪ ನಿಬಂಧಕರು, ಬಳ್ಳಾರಿ ಜಿಲ್ಲೆ. ಬಳ್ಳಾರಿ | 18 |
| 6 | ಸಹಕಾರ ಸಂಘಗಳ ಉಪ ನಿಬಂಧಕರು, ಯಾದಗಿರಿ ಜಿಲ್ಲೆ. ಯಾದಗಿರಿ | 1 |
| | ಒಟ್ಟು | 720 |
| | | |
| | ಕೇಂದ್ರ ಕಛೇರಿ | |
| 1 | ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯ | 50 |
| 2 | ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) | 111 |
| 3 | ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) | 55 |
| 4 | ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) | 27 |
| 5 | ಸಹಕಾರ ಸಂಘಗಳ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) | 13 |
| 6 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) | 2170 |
| 7 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಐ.ಸಿ.ಡಿ.ಪಿ) | 13 |
| 8 | ಸಹಕಾರ ಸಂಘಗಳ ಜಂಟಿ ನಿಬಂಧಕರು (ಕಾನೂನು ಕೋಶ) | 0 |
| | ಒಟ್ಟು | 2439 |
| 1 | ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್.ನಿ, ಬೆಂಗಳೂರು | 89 |
| 2 | ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ.ನಿ, ಹುಬ್ಬಳ್ಳಿ | 632 |
| 3 | ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ.ನಿ, ಬೆಂಗಳೂರು | 1295 |
| 4 | ಸೌಹಾರ್ಧ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ನಿ.441), ಬೆಂಗಳೂರು | 3965 |
| | ಒಟ್ಟು | 5981 |
| | ಒಟ್ಟಾರೆ | 20028 |

ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ).